Regd No B G 155 Sri 8—5—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಆರ್.ವಿ.ಸಿಂಪ್ಸೇದಾರ್ ಎಂ ಏ ಶುಬ್ಬರಾಯುರು ‖ ಸಂಪಾದಕರು — ಧರ್ಮಪ್ರ ಚಾರಪಂಡಿತ ಎಂ ಎಸ್ ಕೃಷ್ಣರಾವ್ 2 ಪೈಸೆ

(86) 2

ಹಳೆಯ ನೋಟುಗಳಿಗೆ ಹೊಸ ನೋಟು

ಅಲ್ಲಾವುದ್ದೀನ್ ಕಥೆಯಲ್ಲ, ನೆದರ್ಲ್ಯಾಂಡ್ಸಿನ ನೈಜ ಚಿತ್ರ

—0—

ಅಮೆಸ್ಟರ್‌ಡಾಂ ನಗರದ ಮಧ್ಯಭಾಗದಲ್ಲಿ ಹಳೆಯದೊಂದು ಕಟ್ಟಡದ ಮಹಡಿಯ ಮೇಲೆ ನಾಲ್ಕು ಜನರು ಸದಾ ಅದೇನೋ ಉದ್ಯೋಗನಿರತರಾಗಿರುತ್ತಾರೆ. ಅವರು ಮಾಡುವ ಉದ್ಯೋಗವು ವಿಶ್ವದಲ್ಲೇ ಅಪೂರ್ವವಾದದ್ದು.

ಹಳೆಯ ಚಲಾವಣೆಯಲ್ಲಿದ್ದ ಅರ್ಧ ಹರಿದ ನೋಟುಗಳು ಕೈತೋಟ ಚಲಾವಣೆಯಿಂದ ಮಾಯವಾಗುವುದೆಂದು ಎಲ್ಲರಿಗೂ ಗೊತ್ತೇ ಇರಬಹುದು ; ಆದರೆ ಅವುಗಳ ಅಂತ್ಯವೇ ನೆಂದು ಅನೇಕರಿಗೆ ತಿಳಿದಿಲ್ಲ ; ಕೇಂದ್ರ ಬ್ಯಾಂಕಿನಲ್ಲಿ ಅವುಗಳನ್ನು ನಾಶ ಮಾಡಿದ ಮೇಲೆ ಹೊಸದಾದ, ಎಳೆದೂಡಿದರೆ ಚುರ್ ಎಂದು ಸದ್ದು ಮಾಡುವಂತಹ ಹೊಸ ನೋಟುಗಳನ್ನು ಬಿಡುಗಡೆ ಮಾಡಲಾಗುವುದು : ಆದರೆ ಅಮೆಸ್ಟರ್‌ಡಾಂನ ಈ ನಾಲ್ವರು ಮಾಡುವ ಕಾರ್ಯವು ನೋಟುಗಳಿಗೆ ಸಂಬಂಧಪಟ್ಟದ್ದಾದರೂ ಪ್ರತ್ಯೇಕ ವೈಶಿಷ್ಟ್ಯದಿಂದ ಕೂಡಿದೆ ; ಹಾಂದ ನೋಟುಗಳ ಚೂರುಗಳನ್ನು ಹೊಸದರಂತೆಯೇ ಜೋಡಿಸುವುದೇ ಅವರ ಕೆಲಸ ; ಬೆಂಕಿಯ ಕಾರಣದಿಂದಲೋ, ನಾಯಿ ಜಿಕ್ಕಿ ಎಳೆದಾಡಿದ್ದುವುಗಳ ಕೈಗೊ, ಬಾಗಲಿಗೋ ಸಿಕ್ಕಿದ್ದರಿಂದಲೋ ಚಿಂದಿಯಾದ ನೋಟುಗಳನ್ನು ಹೋಡಿಸಿ ತನ್ಮೂಲಕ ಅನೇಕರಿಗೆ ಅದನ್ನೆಲ್ಲಾ ಬಡಬಗ್ಗರಿಗೆ ಇವರು ಉಪಕಾರಮಾಡುತ್ತಿದ್ದಾರೆ.

ಹಾಲೆಂಡಿನ ವೈತನೊಬ್ಬ ಹಣದ ಚೀಲವನ್ನು ಕಟ್ಟೆಯೊಂದರ ಮೇಲಿಟ್ಟು ದೊಡ್ಡ ಕೆಲಸದ ಹಂದಿಯೊಂದಿಗೆ ವ್ಯಾಪಾರ ಮಾಡುತ್ತಿದ್ದನು ; ವ್ಯಾಪಾರ ಮುಗಿದು ತಿರುಗಿ ನೋಡಿದಾಗ ಅದೇ ಹಂದಿ ಅವನ ಹಣದ ಚೀಲವನ್ನು ತಿಂದು ಕಿಬ್ಬಿ ನುಂಗಿತ್ತು ; ಎಳೆಯಲು ಮಾಡಿದ ಸಾಹಸ ವಿಫಲವಾಯಿತು ; ಅವನ ನೋಟುಗಳಾಗಿ ಹಂದಿಯನ್ನು ವಧಿಸಲು ಅದು ವ್ಯಾಪಾರಿಕ ಒಪ್ಪಲಿಲ್ಲ ; ಕೊನೆಗೆ ನಾಲ್ಕು ಜನ ಸೇರಿ ಅದಕ್ಕೆ ಎಣ್ಣೆ ಕುಡಿಸಿದರು ; ಎಣ್ಣೆಯ ಕೈಯಿಂದ ಹೊರಬಂದ ನೋಟುಗಳ ತುಂಡುಗಳನ್ನು ಚಡೇತಿಗೆ ಕೊಂಡೊಯ್ಯಲಾಯಿತು ; ಛಿದ್ರಗಳಿಂದ ರೈತನಿಗೆ ಎಷ್ಟು ನಷ್ಟವಾಗಿದೆಯೆಂಬುದನ್ನು ಕಂಡು ಹಿಡಿದು, ಅಷ್ಟಕ್ಕೆ ಹೊಸ ನೋಟುಗಳನ್ನು ಕೊಡಲಾಯಿತು : ಅಂದಿನಿಂದ ಆ ರೈತ ಹಣದ ಚೀಲವನ್ನು ಕುತ್ತಿಗೆಗೇ ನೇತ ಹಾಕಿಕೊಂಡಿರುತ್ತಾನೆ.

ಒಂದು ದಿನ ಈ ಕಛೇರಿಗೆ ವಿಚಿತ್ರವಾದ ಛಾಂಗಿಯೊಂದು ಬಂದಿತು ; ಅದನ್ನು ತೆಗೆದು ನೋಡಿದಾಗ ಅದರಲ್ಲಿದ್ದುದು ಒಂದು ಹಸುವಿನ ಜಠರಕೋಶ, ಆದು ಅನೇಕ ಗಿಲ್ಡರುಗಳ ನೋಟುಗಳನ್ನು ತಿಂದುಹಾಕಿದೆಯೆಂದು ಅದರೊಂದಿಗೆ ಕಾಗದಲ್ಲಾಗಿದ್ದ ಪತ್ರವೊಂದರಲ್ಲಿ ಬರೆಯಲಾಗಿತ್ತು ; ನಾಲ್ವರು ಪರಿಣಿತರು ಆ ಜಠರಕೋಶದಲ್ಲಿ ಪರೀಕ್ಷೆಗಳನ್ನು ನಡೆಸಿ ನೋಡಿದರು. ಎಷ್ಟು ನೋಟುಗಳ ತುಂಡು ಸಿಕ್ಕಿಹುವೋ; ಎಷ್ಟನ್ನು ರಾಜುವಾತು ಮಾಡಲು ಸಾಧ್ಯವಾಗುತ್ತೋ ಅಷ್ಟನ್ನು ಛಾಂಗಿ ಕಳಿಸಿದವನಿಗೆ ಅರ್ಥಿಕ ನಷ್ಟವಾಗಿದವನಿಗೆ ಕೊಡಲಾಯಿತು

] ಹಿಂದಿನ ಪುಟ ನೋಡಿ]

ಪಾರ್ಲಿಮೆಂಟು ಸ್ಥಾನಕ್ಕೆ ಕೋರ್ಟ್ ನೆಮನ್ಸ್

★

ರಾಜಭವನದಲ್ಲಿ ದೂಂಡ ಪೆಟ್ಟಿಗೆ

ತಿರುವನಂತಪುರಂ — ಇಲ್ಲಿನ ರಾಜಭವನದ ಪ್ರಮುಖ ಪ್ರದೇಶದಲ್ಲಿ ದೂಂಡ ಪೆಟ್ಟಿಗೆ ಇಡಲಾಗಿದೆ ; ಯಾರು ಬೇಕಾದರೂ ಅದರಲ್ಲಿ ತಮ್ಮ ದೂಂನ್ನು ಹಾಕಬಹುದು

★

ಎಜೆಟಿ ಪ್ರಯತ್ನ

ಬೆಂಗಳೂರು — ಮೇರಿ ದೇವಾಸಿಯೇಷನ್ನು ಮುಕ್ತ ಕೆಲಸಕ್ಕೆ ತೆಗೆದುಕೊಳ್ಳುವಂತೆ ರೂಢಿಸಲು ಎಜೆಟಿ ಭಗೀರಥ ಪ್ರಯತ್ನ ಮಾಡುತ್ತಿದೆ — 12 ಗಂಟೆ ಮುಖ್ಯ ಕಛೇರಿ ಮುಂದೆ ಉಪವಾಸ — ಈ ಬಗ್ಗೆ ಗೌರ್ನರ್ಮೆಂಟಿಗೆ ಮನವಿ ಕಾರ್ಯಾಲಯ ಮಾಡಿ 5 ಪುಟಗಳ ಮನವಿ ಅರ್ಪಿಸಲಾಗಿದೆ.

★

ಖನಿಜ ಶೋಧ

ಬೆಂಗಳೂರು — ಭಿನ್ನ ಮಾತೀಯರು ತಮ್ಮ ಪಕ್ಕಕ್ಕೆ ಜನತಾ ಪಾರ್ಟಿ ಎಂದು ನಾಮಕರಣ ಮಾಡಿಕೊಂಡರು — ತಮ್ಮ ಧ್ವಜ ಬಿಳಿ ಮತ್ತು ಹಸಿರು.

◉

ಕಾಲಕಾ ಪರಿಸ್ಥಿತಿ

ಮೈಸೂರು — ತಾ ॥ 6 ರಂದು ನಾಪತ್ತೆಯಾದ ಇಲ್ಲ — ಪತ್ರಿಕಾಭಿಪ್ರಾಯದಿಂದ ಇಲ್ಲಿಯವರೆಗೆ ರೋಗಕಗ್ರಸ್ತರಿದವರು 502, ಸಾವು 54.

★

ಶಾಲೆಯ ಪಂಚಾಂಗ

ದೈವಜ್ಞ ಶಿಖಾಮಣಿ

ಅಸ್ಥಾನವಿದ್ವಾಂಸರು ಧರ್ಮಾಧಿಕಾರಿ ರಾಜಕಾರ್ಯಧುರೀಣ ಜ್ಯೋತಿರ್ವಿದ್ವನ್ಮಣಿ ಸಂಪತ್ಕೃಷ್ಣಜೋಯಿಸರಿಂದ

9 ಭಾಷೆಗಳಲ್ಲಿ ಪ್ರಕಟ ಮುಖ

ನವದೆಹಲಿ — ಶ್ರೀ ಮಧು ಲಿಮಯೆ ಪಾರ್ಲಿಮೆಂಟಿನಲ್ಲಿ ತಮ್ಮ ಖೋಕಾ ನಿರ್ಣಯಕ್ಕೆ ಅವಕಾಶ ಕೊಡಲಿಲ್ಲವೆಂದು ಹಾಕಿದ ರಿಟ್ ಬಗ್ಗೆ ಸ್ಪೀಕರ್‌ಗೆ ನೋಟೀಸು ಬಂದಿತು — ಸ್ಪೀಕರ್ ಮೇಲೆ ಯಾವ ಕೋರ್ಟಿನ ಅಧಿಕಾರ ಕೂಡದೆಂದು ಲೋಕಸಭೆ ಅಭಿ ಅಭಿಪ್ರಾಯ ಪಟ್ಟಿತು ಮತ್ತು ಒಬ್ಬ ಸದಸ್ಯರು ಸಮಸ್ಯೆಯನ್ನು ಇಲ್ಲೇ ಪರಿಹರಿಸಿಕೊಳ್ಳದೆ ಕೋರ್ಟಿಗೆ ಹೋದುದಕ್ಕೆ ಆಕ್ಷೇಪಿಸಿ ವ್ಯಕ್ತ ಪಡಿಸಿತು.

❋

ಕದನ ಸ್ತಂಭ

ನವದೆಹಲಿ — ಕಚ್‌ನಲ್ಲಿಯ ರಣಸಲ್ಲಿ ಪರಿಸ್ಥಿತಿಯನ್ನು ಹಿಂದಿನಂತೇ ಇರಗೊಟ್ಟು ಕದನಸ್ತಂಭ ಮಾಡಿಕೊಳ್ಳಲು ಬ್ರಿಟೇನು ಪ್ರಧಾನಿ ಶ್ರೀ ವಿಲ್ಸನ್ ರ ಯೋಜನೆಯಂತೆ ನಡೆಯಲು ಪಾಕಿಸ್ತಾನಕ್ಕೆ ಪ್ರಧಾನಿ ಶಾಸ್ತ್ರಿಗಳು ಹೇಳಿಕಳಿಸಿದರೆಂದು ದೇಶ ಮಾಡಿದರು.

ವಿಜ್ಞಾನ

ಮೈಸೂರು ಮುನಿಸಿಪಲ್ ಕಮಿಷನರು ಮತ್ತು ಹೆಚ್ಚಿನ ಹೋಟಲ್ ಗಳಿಗೆ ಭೇಟಿಕೊಟ್ಟು ಅಧ್ಯಯನ ಪಡೆದ ಕಾಲ ವಿಷಾದ ನಡೆಸುವ ತಾಜಾಇಲ್ಲದ ಹೋಟಲುಗಳನ್ನು ಎಚ್ಚರಿಸಿದರು.

ಜೆಲಬಿಶ್ಕಗಳಲ್ಲಿ ಮುತ್ತಿರಿನ್ನದು

ನವದೆಹಲಿ — ಭಾರತ ಚಲನಚಿತ್ರ ಮಹೋದ್ಯೋಗದಲ್ಲಿ ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಶ್ರೀ ಲೋಕನಾಥ ಮಿಶ್ರರು ಚಲನಚಿತ್ರಗಳಲ್ಲಿ ಮುತ್ತಿಟ್ಟು ಕೊಳ್ಳುವುದು ಏನೂ ತೀರಿಲ್ಲವೆಂದರು ; ಆದರೆ ಓರ್ವ ಮಹಿಳಾ ಸದಸ್ಯರು ಇದ್ದ ಭಾರತೀಯ ಜೀವನಕ್ಕೆ ಅಸಂಬದ್ಧವೆಂದರು.

(ಹಿಂದಿನ ಪುಟದಿಂದ ಮುಂದಕ್ಕೆ)

ಆಲ್ಲದೆ, ಕೆಲವರು ಸುಳ್ಳು ಹೇಳುವುದೂ ಉಂಟು : ನೋಡಿ ಇಷ್ಟೇ ನ ದ್ದು ನಾನು ನೂರು ಗಿಲ್ಡರುಗಳ 10 ನೋಟುಗಳನ್ನು ತಂದು ಹಾಕಿದೆ ಎಂದು ದೂರು ಕೊಡುವವರೂ ಇದ್ದಾರೆ ; ಎಲ್ಲಿಲ್ಲಿ ಹುಡಕಿದರೂ ಒಂದೇ ನೋಟು ಸಿಕ್ಕಾಗ ಬೇರೇ ಮಾರ್ಗವಿಲ್ಲದೆ ಅಷ್ಟನ್ನೇ ತೆಗೆದುಕೊಂಡು ಹೋಗುತ್ತಾನೆ ದೂರಿತ್ತದೆ ; ರಸ್ತೆ ಅಪಘಾತಗಳಲ್ಲಿ ಸಾಯುವುದು ತೋಯು ರಕ್ತಹೆಪ್ಪುಗಟ್ಟುವ ಹ್ಯಾಂಡುಬ್ಯಾಗುಗಳು ಸಹಾ ಇಲ್ಲಿಗೆ ಬರುವುದುಂಟು. ಬಂಧಗಳನ್ನು ಕಳೆದು ಕೊಂಡು ವಿಲಪಿಸುತ್ತಿರುವವರಿಗೆ ಈ ಸಂಸ್ಥೆಯು ಅವರ ಹ್ಯಾಂಡುಬ್ಯಾಗಿನಲ್ಲಿರುವ ನೋಟುಗಳಿಗೆ ಬದಲು ಚೆಕ್ಕುವಣಿ ಮಾಡಬಹುದಾದಂಥ ನೋಟುಗಳನ್ನು ನೀಡಿ ಸಂತೈಸಲು ಯತ್ನಿಸುತ್ತಿದೆ. ಹೀಗೆ ತನ್ನ ಒಳ್ಳೆಯ ಕಾರ್ಯಗಳಿಂದ ಜಗತ್ತಿನ ಲ್ಲಿಯೇ ಎನೂ ಕಪವನ್ನೆನಿಸಿಕೊಂಡಿರುವ ಈ ಸಂಸ್ಥೆಗೆ ಸಕಲಂ ಹಾರೈಕೆ. ಅಶೀರ್ವಾ ದಗಳವೆ.



ಗೋರಕ್ಷಣಾಪ್ರಾಣದಯಾ ಕಾರ್ಯಗಳು ಹೆಚ್ಚಿಳ್ಳಾಗಿ ನಡೆಯಲಿ

ವುಡ್‌ಲಾಂಡ್ 7-5-65 ರಿಂದ
ಶಿ ನ ಮಾ ವೈಭವ ಆರಂಭ

ಶರಾಬಿ (ಹಿಂದಿ) Sharabi

ಪಾತ್ರ— ದೇವಾನಂದ್, ಮಧ ಬಾಲ, ಲಲಿತ ಪವಾರ್, ಮುಂತಾದವರು
ಸಂಗೀತ : ಮದನಮೋಹನ್ — ಡೈರೆಕ್ಷನ್ : ರಾಜ್ ಖೋಸ್ಲಾ
ಪ್ರತಿದಿನ 3 ಪ್ರದರ್ಶನಗಳು

ಅಪೆರಾ— ಜನಭರಿತ 2 ನೇ ವಾರ
ಅಮೋಘ ಕನ್ನಡ ಚಿತ್ರ — ದಿನ 3 ಆಟಗಳು
ಸರ್ವಜ್ಞಮೂರ್ತಿ [ಕನ್ನಡ]
ಪಾತ್ರ- ರಾಜಕುಮಾರ್, ಉದಯಕುಮಾರ್, ಹರಿಣಿ ವೈಜಯಂತಿ, ಬಾಲಕೃಷ್ಣ

SHAKTI
SUDHA

A Superb Tonic

Help The Gorakshana

★

"ಗೋರಕ್ಷಣಾ" ಕ್ಕೆ ಚಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಸಾಮ್ರಾಜ್ಯಂಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸಾಮ್ರಾಜ್ಯಂಗಳವರ ಅಂತರಾತ ಅನುಗ್ರಹ ಕೃಪೆಯಿಂದಾಗಿ
ಕೃಷ್ಣಶಾಂತಿಸಂಕಲ್ಪ ಗೋರಕ್ಷಣೆ, ಪಾಠಶಾಲೆ, ಶಾಖಾಹಾರ, ಪಶುವೈದ್ಯ
ವಿಚಾರಗಳಿಂದ ಕೂಡಿದ ನಿಮ್ಮೆಲ್ಲ ಸ್ವಚ್ಛಾಂಗಪಾಸಪತ್ರಿಕೆ.
ವಾರ್ಷಿಕ ಚಂದಾ 50 ಸೈನೆ ; ಗೋರಕ್ಷಣಾ ಕ್ಕೆ ಲೇಖನಗಳನ್ನೂ ಸ್ವೀಕಾರ್ಹ ಧನವನ್ನೂ ಪಂಡನಾಪೂರ್ವಕವಾಗಿ ಸ್ವೀಕರಿಸಲಾಗುವುದು
ವಿಳಾಸ— ಗೋರಕ್ಷಣಾ ಆಫೀಸು ಶಾಕಾಹಾರವಿದ್ಯಾಲಯ, ಮೈಸೂರು 4

Edited, Printed & Published by the Proprietor
Dharma Prachara Nirata M S Krishna Rao
at the Satyavadi Press Camarajapuram Mysore 4